# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 209 (271) |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 06-12-2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರೈತರಿಗೆ ತತ್ಕಾಲ್ ಪೋಡಿಗಾಗಿ ಅರ್ಜಿ ಶುಲ್ಕವನ್ನು ಪಡೆದು ದುರಸ್ತಿ ಮಾಡದೆ (ಅಳತೆ ಮಾಡದೆ) ಹಾಗೆ ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸರ್ಕಾರದ ಗಮನಕ್ಕೆ ಬಂದಿದೆ.<br>ರಾಜ್ಯದಲ್ಲಿ ರೈತರು **ತತ್ಕಾಲ್** ಪೋಡಿಗಾಗಿ ಅರ್ಜಿ ಸಲ್ಲಿಸಿರುವ ಅರ್ಜಿಗಳ ಪೈಕಿ ಅಳತೆ ಮಾಡದೆ ವಿಲೇವಾರಿ ಮಾಡಿರುವ ಪ್ರಕರಣಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| (ಆ) | ಹಾಗಿದ್ದಲ್ಲಿ ಈ ರೀತಿ ವಿಲೇವಾರಿ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು? | |
| (ಇ) | ಹದ್ದುಬಸ್ತು ಅಳತೆಗೆ ಅರ್ಜಿ ಶುಲ್ಕ ಪಾವತಿಸಿಕೊಂಡು ಅಳತೆ ಮಾಡದೆ ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿದೆ.<br>ರಾಜ್ಯದಲ್ಲಿ ರೈತರು ಹದ್ದುಬಸ್ತು ಅಳತೆ ಕೋರಿ ಅರ್ಜಿ ಸಲ್ಲಿಸಿರುವ ಅರ್ಜಿಗಳ ಪೈಕಿ ಅಳತೆ ಮಾಡದೆ ವಿಲೇವಾರಿ ಮಾಡಿರುವ ಪ್ರಕರಣಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| (ಈ) | ಬಂದಿದ್ದಲ್ಲಿ ವಿಲೇವಾರಿ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು | |
| (ಉ) | ವಿಲೇವಾರಿ ಮಾಡಲು ಕಾರಣಗಳೇನು? | ಭೂಮಾಪನ ಇಲಾಖೆಯಲ್ಲಿ ಹದ್ದುಬಸ್ತು ಮತ್ತು ತತ್ಕಾಲ್ ಪೋಡಿ ಇತ್ಯಾದಿ ಅಳತೆ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಿ, ತಂತ್ರಾಂಶದ ಮೂಲಕ ಅಳತೆಗಾಗಿ ಸರದಿ ಸಾಲಿನಂತೆ ಭೂಮಾಪಕರಿಗೆ ವಿತರಿಸಿ ಅಳತೆಯಾದ ನಂತರ ಅಪ್‌ಲೋಡ್ ಮಾಡುವುದು, ಕಡತಗಳ ಪರಿಶೀಲನೆ ಹಾಗೂ ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲೇ ಸರದಿ ಸಾಲಿನಂತೆ ನಿರ್ವಹಿಸಲಾಗುತ್ತಿದೆ.<br><br>ಮೋಜಿಣಿ ತಂತ್ರಾಂಶದ ಮೂಲಕ ಅಳತೆಗೆ ಯೋಗ್ಯವಿರುವ ಪ್ರಕರಣಗಳನ್ನು ಮಾತ್ರ ಜೇಷ್ಠತೆಯ ಮೇರೆಗೆ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಲಾಗುತ್ತಿದ್ದು, ಹಂಚಿಕೆಯಾದ ಪ್ರಕರಣಗಳಲ್ಲಿ 30 ದಿನಗಳ ಒಳಗಾಗಿ ಅಳತೆ ಕ್ರಮ ಕೈಗೊಂಡು ಅಪ್‌ಲೋಡ್ ಮಾಡುವಂತೆ ಸೂಚನೆ ನೀಡಲಾಗಿದೆ.<br><br>ಅಳತೆ ಪ್ರಕರಣಗಳಲ್ಲಿ ಭೂಮಾಪಕರು ಸಂಬಂಧಿಸಿದ ಅರ್ಜಿದಾರರು/ಹಕ್ಕುದಾರರಿಗೆ ಮುಂಚಿತವಾಗಿ ನೋಟೀಸ್ |

| | | |
|---|---|---|
| | | ನೀಡಿ ನಿಗಧಿತ ದಿನಾಂಕರಂದು ಸ್ಥಳಕ್ಕೆ ಹಾಜರಾದ ಸಂದರ್ಭದಲ್ಲಿ,<br>1. ಅರ್ಜಿದಾರರು ಮರಣ ಹೊಂದಿರು ದರಿಂದ<br>2. ಜಮೀನಿನಲ್ಲಿ ಎತ್ತರವಾದ ಬೆಳೆ ಇದ್ದು, ಅಳತೆ ಸಾದ್ಯವಾಗದ ಕಾರಣ ಅರ್ಜಿದಾರರು ಪ್ರಕರಣ ವಿಲೇ ಗೊಳಿಸಲು ಕೋರಿದ ಮೇರೆಗೆ<br>3. ಹಕ್ಕಿನ ಬಗ್ಗೆ ಗೊಂದಲ ಮತ್ತು ಇನ್ನಿತರ ಕಾರಣದಿಂದ ಅಳತೆ ವೇಳೆ ಗಲಭೆ ಉಂಟಾಗುವುದರಿಂದ<br>4. ಅರ್ಜಿದಾರರು ವಿವಿಧ ಕಾರಣಗಳಿಂದಾಗಿ ಈಗ ಅಳತೆ ಮಾಡದಂತೆ ಮತ್ತು ಅಳತೆ ಸ್ಥಗಿತಗೊಳಿಸುವಂತೆ ಮನವಿ ಸಲ್ಲಿಸುವುದರಿಂದ<br>ಇತ್ಯಾದಿ ಕಾರಣಗಳಿಂದ ಅಳತೆ ಪ್ರಕರಣಗಳಲ್ಲಿ ಭೂಮಾಪಕರು ಅಳತೆ ಮಾಡದೆ ಕಡತವನ್ನು ವಿಲೇವಾರಿ ಮಾಡುತ್ತಿರುತ್ತಾರೆ. |
| (ಊ) | ಯಾವ ಕಾಲಮಿತಿಯಲ್ಲಿ ನಿಯಮ ಬಾಹಿರ ಕ್ರಮವನ್ನು ತಡೆಗಟ್ಟಲಾಗುವುದು? | ಮೋಜಿಣಿ ತಂತ್ರಾಂಶದಲ್ಲಿ ಯಾವುದೇ ಅರ್ಜಿಯನ್ನು ಭೂಮಾಪಕರು ಮತ್ತು ತಪಾಸಕರ ಹಂತದಲ್ಲಿ ವಿಲೇಗೊಳಿಸುವ ಅವಕಾಶವನ್ನು ಮಾರ್ಪಡಿಸಿ, ಭೂದಾಖಲೆಗಳ ಸಹಾಯಕ ನಿರ್ದೇಶಕರ (ಲಾಗಿನ್) ಹಂತದಲ್ಲಿ ವಿಲೇಗೊಳಿಸುವ ಅವಕಾಶವನ್ನು ನೀಡಿದ್ದು, ಯಾವುದೇ ಅರ್ಜಿಯನ್ನು ವಿಲೇಗೊಳಿಸಲು ಭೂಮಾಪಕರು ಸಲ್ಲಿಸಿರುವ ವರದಿಯನ್ನು ಕೊಲಂಕುಷವಾಗಿ ಪರಿಶೀಲಿಸಿ ನೈಜತೆಯನ್ನು ಖಾತರಿಪಡಿಸಿಕೊಂಡು ನಂತರ ಅರ್ಜಿಯನ್ನು ವಿಲೆಗೊಳಿಸುವಂತೆ ಸೂಚಿಸಲಾಗಿದೆ. |

**ಸಂಖ್ಯೆ: ಕಂಇ 186 ಎಸ್ಎಸ್‌ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ಅನುಬಂಧ-1 LCQ 271 | | | |
|---|---|---|---|
| ದಿನಾಂಕ 1-4-2023 ರಿಂದ 31-10-2023 ರ ವರೆಗೆ ಅಳತೆ ಮಾಡದೇ ವಿಲೇವಾರಿ ಮಾಡದ ತತ್ಕಾಲ್ ಪೋಡಿ ಹದ್ದುಬಸ್ತು ಅರ್ಜಿಗಳ ವಿವರ | | | |
| ಕ್ರ. | ಜಿಲ್ಲೆ | ಅಳತೆ ಮಾಡದೇ ವಿಲೇವಾರಿ ಮಾಡಿದ ಹದ್ದುಬಸ್ತು ಅರ್ಜಿಗಳ ಸಂಖ್ಯೆ | ಅಳತೆ ಮಾಡದೇ ವಿಲೇವಾರಿ ಮಾಡಿದ ತತ್ಕಾಲ್ ಪೋಡಿ ಅರ್ಜಿಗಳ ಸಂಖ್ಯೆ |
| 1 | ಉಡುಪಿ | 242 | 1593 |
| 2 | ಉತ್ತರಕನ್ನಡ | 155 | 398 |
| 3 | ಕೊಡಗು | 67 | 98 |
| 4 | ಕೊಪ್ಪಳ | 879 | 1201 |
| 5 | ಕೋಲಾರ | 2208 | 1768 |
| 6 | ಗದಗ | 149 | 287 |
| 7 | ಗುಲ್ಬರ್ಗ | 278 | 2427 |
| 8 | ಚಾಮರಾಜನಗರ | 388 | 801 |
| 9 | ಚಿಕ್ಕಬಳ್ಳಾಪುರ | 1821 | 1131 |
| 10 | ಚಿಕ್ಕಮಗಳೂರು | 256 | 1362 |
| 11 | ಚಿತ್ರದುರ್ಗ | 212 | 1505 |
| 12 | ತುಮಕೂರು | 2453 | 4401 |
| 13 | ದಕ್ಷಿಣ ಕನ್ನಡ | 111 | 1007 |
| 14 | ದಾವಣಗೆರೆ | 1141 | 1379 |
| 15 | ಧಾರವಾಡ | 39 | 219 |
| 16 | ಬಳ್ಳಾರಿ | 679 | 413 |
| 17 | ಬಾಗಲಕೋಟೆ | 671 | 601 |
| 18 | ಬಿಜಾಪುರ | 789 | 1208 |
| 19 | ಬೀದರ್ | 393 | 1911 |
| 20 | ಬೆಂಗಳೂರು ಗ್ರಾಮಾಂತರ | 983 | 905 |
| 21 | ಬೆಂಗಳೂರು ನಗರ | 1316 | 1023 |
| 22 | ಬೆಳಗಾವ | 1536 | 2023 |
| 23 | ಮಂಡ್ಯ | 2401 | 3609 |
| 24 | ಮೈಸೂರು | 1747 | 2210 |
| 25 | ಯಾದಗಿರ್ | 588 | 1121 |
| 26 | ರಾಮನಗರ | 1478 | 1856 |
| 27 | ರಾಯಚೂರು | 324 | 1664 |
| 28 | ವಿಜಯನಗರ | 306 | 407 |
| 29 | ಶಿವಮೊಗ್ಗ | 451 | 781 |
| 30 | ಹಾವೇರಿ | 71 | 460 |
| 31 | ಹಾಸನ | 985 | 3831 |
| | **ಒಟ್ಟು** | **25117** | **43600** |